CC 2039/25

PW-1

**ಮುಂದುವರೆದ ಮುಖ್ಯ ವಿಚಾರಣೆ . ಮಾನ್ಯ ಸಹಾಯ ಸರ್ಕಾರಿ ವಕೀಲರಿಂದ**

ಸದರಿ ದಿನಾಂಕದಂದು ನನ್ನಿಂದ ಮೊಬೈಲನ್ನು ಕಿತ್ತುಕೊಂಡು ಹೋಗಿರುವುದನ್ನು ಆರೋಪಿತರನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿ ದೃಶ್ಯ ಸಮ್ಮೇಳನದ ಮೂಲಕ ಹಾಜರುಪಡಿಸಿದ 2 ಮತ್ತು 3ನೇ ಆರೋಪಿತರನ್ನು ನೋಡಿ ಅವರ ಹೆಸರಿನೊಂದಿಗೆ ಗುರುತಿಸಿರುತ್ತಾರೆ. ಉಳಿದ ಆರೋಪಿತರ ಹೆಸರನ್ನು ನನಗೆ ಹೇಳಲಾಗುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ದೂರು ಮಹಜರ್ ಮತ್ತು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ದೂರು ಮಹಜರ್ ಮತ್ತು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ದೂರು ಮಹಜರ್ ಮತ್ತು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರಿಂದ**

ನಾನು ನನ್ನ ದೂರಿನಲ್ಲಿ ಆರೋಪಿತರು ನನ್ನ ಕೊರಳಲ್ಲಿದ್ದ ಚೈನನ್ನು ಮತ್ತು ಕೈಯಲ್ಲಿದ್ದ ಚೈನನ್ನು ಮತ್ತು ಮೊಬೈಲನ್ನು ಚಾಕುವನ್ನು ತೋರಿಸಿ ಕಿತ್ತುಕೊಂಡು ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಅದೇ ದಿನ ನಾನು ರಾತ್ರಿ 01 ಗಂಟೆಗೆ ಠಾಣೆಗೆ ಹಾಜರಾಗಿ ದಿಃ 02-04-2025 ರಂದು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ದಿಃ03-04-2025 ರಿಂದು ಪೊಲೀಸರು ಮಹಜರನ್ನು ಜರುಗಿಸಲು ನಾನು ತೋರಿಸಿದ ಸ್ಥಳವಾದ ಮಂಗಜ್ಜರ ತೋಟಕ್ಕೆ ಬಂದಿರುತಾರೆ ಎಂದರೆ ಸರಿ. ಸದರಿ ಸಮಯಕ್ಕೆ ನನ್ನೊಂದಿಗೆ ಚಾಸಾ-2 ಮತ್ತು 3 ರವರು ಹಾಜರಿದ್ದರು ಎಂದರೆ ಸರಿ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 9-30 ರಿಂದ 10-15 ರವರೆಗೂ ನಿಪಿ-8 ರಂತೆ ಜರುಗಿಸಿದ್ದರು ಎಂದರೆ ಸರಿ. ಸದರಿ ನಿಪಿ-8 ಕ್ಕೆ ನನ್ನೊಂದಿಗೆ ಚಾಸಾ-2 ಮತ್ತು 3 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ಅದೇ ದಿನಾಂಕದಂದು ನಾನು ತೋರಿಸಿದ ಸ್ಥಳದಲ್ಲಿ ಪೊಲೀಸರು ನಿಪಿ-2 ರಂತೆ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10-30 ರಿಂದ 11-15 ರವರೆಗೂ ಜರುಗಿಸಿದ್ದರು ಎಂದರೆ ಸರಿ. ದಿಃ 03-04-2025 ರಂದು ನಿಪಿ-1 ರ ವಿಚಾರವಾಗಿ ಪೊಲೀಸರು 1 ರಿಂದ 4 ನೇ ಆರೋಪಿತರು ನಲ್ಲೂರಿನ ವಾಸಿಯಾದ ಮೊಹಮ್ಮದ್ ಜಾವಿದ್ ರವರನ್ನು ಕೊಲೆ ಮಾಡಬೇಕೆಂದು ಸಂಚು ರೂಪಿಸಿ ಕೊಲೆ ಮಾಡಿ, ನಂತರ ಬೇರೆ ಕಡೆ ಎಲ್ಲಾದರೂ ಹೋಗಿ

ಇರಬೇಕೆಂದು ಅದಕ್ಕಾಗಿ ಹಣ ಬೇಕಾಗಿದ್ದು, ರಸ್ತೆಯಲ್ಲಿ ಬರುತ್ತಿದ್ದ ವಾಹನಗಳನ್ನು ಅಡ್ಡಗಟ್ಟಿ ದಾರಿಹೋಕರಿಂದ ಬೆಲೆಬಾಳುವ ಆಭರಣ ಮತ್ತು ಹಣವನ್ನು ಸುಲಿಗೆ ಮಾಡುವ ಸಂಚು ರೂಪಿಸಿದ್ದರು ಎಂದರೆ ಸರಿ. ಅದರಂತೆ 1 ರಿಂದ 3ನೇ ಆರೋಪಿತರು ಕೆ-17 ಹೆಚ್ 6699 ಮೋಟಾರ್ ಬೈಕ್ ಅನ್ನು ಮಂಗಜ್ಜರ ತೋಟದ ಬಳಿ ನಿಲ್ಲಿಸಿ ನನ್ನನ್ನು ಹೆದರಿಸಿ ನನ್ನ ಬಳಿ ಇದ್ದ ಬಂಗಾರ ಮತ್ತು ಹಣವನ್ನು ಕೇಳಿದ್ದು ನಾನು ಇಲ್ಲವೆಂದು ಹೇಳಿದಾಗ ನನ್ನ ಬಳಿ ಇದ್ದ ಮೊಬೈಲನ್ನು ಕಿತ್ತುಕೊಂಡಿರುತ್ತಾರೆ ಎಂದರೆ ಸರಿ. ನಂತರ ಪೊಲೀಸರು 4ನೇ ಆರೋಪಿ ಬೈಕಿನಲ್ಲಿ ಮಹಮ್ಮದ್ ಜಾವೀದ್ ನನ್ನು ನಲ್ಲೂರಿನ ಸಂತೆ ಮೈದಾನದಿಂದ ಲಿಂಗದಹಳ್ಳಿ ಕಡೆಗೆ ಹೋಗುವ ರುದ್ರೇಗೌಡ ರ ಹೊಸ Layout ಜಾಗದಲ್ಲಿ ಚಾಕುವಿನಿಂದ ಚುಚ್ಚಿ ಕೊಲೆ ಮಾಡುವ ವಿಚಾರ ತಿಳಿಸಿರುತ್ತಾರೆ ಎಂದರೆ ಸರಿ. ನಂತರ ದಿಃ 03-04-2025 ರಂದು ಬೆಳಿಗೆಗ 8 ಗಂಟೆ ಸಮಯಕ್ಕೆ ನಾನು ಪುನಃ ಮರುಗರ ಅಜ್ಜಯ್ಯನ ತೋಟಕ್ಕೆ ಹೋಗಿ ಮೊಬೈಲನ್ನು ಹುಡುಕಾಡಿದಾಗ ನನ್ನ ಮೊಬೈಲ್ ದೊರಕಿದ್ದು, ನಾನು ಅದನ್ನು ತನಿಖಾಧಿಕಾರಿಗಳಿಗೆ ನೀಡಿ ಅಮಾನತ್ತು ಪಂಚನಾಮೆಯನ್ನು ನಿಪಿ-2 ರಂತೆ ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ವಿಚಾರವಾಗಿ ನಾನು 1 ರಿಂದ 3ನೇ ಆರೋಪಿತರನ್ನು ನೋಡಿರುತ್ತೇನೆ ಎಂದು ಪುನಃ ನೋಡಿದರೆ ಗುರುತಿಸುವುದಾಗಿ ದಿಃ 03-04-2025 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಆರೋಪಿತರು ನನ್ನ ಕೊರಳಿನಿಂದ ಕಸಿದುಕೊಳ್ಳಲು ಪ್ರಯತ್ನಿಸಿದ ಚೈನು ಮತ್ತು ಕೈಚೈನು ನೆಲದ ಮೇಲೆ ಬಿದ್ದಿದು, ದೂರನ್ನು ನೀಡಿ ಹಿಂದಿರುಗಿ ಬಂದು ನಮ್ಮ ಗ್ರಾಮಸ್ಥರೊಂದಿಗೆ ಹುಡುಕಾಡಿದಾಗ ಸದರಿ ವಸ್ತುಗಳು ನನಗೆ ಸ್ಥಳದಲ್ಲಿ ದೊರಕಿರುತ್ತವೆ.

**<u>ಪಾಟೀ ಸವಾಲು ಎಂ ಎಸ್ ಜೆ ವಕೀಲರಿಂದಃ</u>**

ನಿಪಿ-1 ಅನ್ನು ನನ್ನ ಸ್ನೇಹಿತನಾದ ಚಾಸಾ-3 ರವರು ಬರೆದಿರುತ್ತಾರೆ. ಸದರಿ ದಿನಾಂಕದಂದು ನಾನು ಚನ್ನಗಿರಿಗೆ ಒಬ್ಬನೇ ಹೋಗಿರುತ್ತೇನೆ. ಸದರಿ ಸಮಯಕ್ಕೆ ಕತ್ತಲಾದ ಕಾರಣ ನನ್ನ ಬೈಕನ್ನು ತಡೆಹಿಡಿದ ವ್ಯಕ್ತಿಗಳು ಯಾರು ಎಯಿ ನಿರ್ದಿಷ್ಟವಾರಿ ಹೇಳಲಾಗುವುದಿಲ್ಲ ಎಂದರೆ ಸರಿ. ಈ ಘಟನೆಗೂ ಪೂರ್ವ ನಾನು ಆರೋಪಿತರನ್ನು ಎಲ್ಲಿಯೂ ನೋಡಿಲ್ಲ ನಾನು ಹೇಳಿದಂತಹ ಘಟನೆ ಸುಮಾರು 9 ಗಂಟೆ ಸಮಯದಲ್ಲಿ ನಡೆದಿರುತ್ತದೆ. ಆರೋಪಿತರು ತಂದಿದ್ದ ವಾಹನ ಸಂಖ್ಯೆ ನನಗೆ ಹೇಳಲಾಗುವುದಿಲ್ಲ. ನಮ್ಮ ವಾಹನಕ್ಕೂ ಮತ್ತು ಆರೋಪಿತರು ತಂದಿದ್ದ ವಾಹನಕ್ಕೂ ಸಮಾರು 4 ರಿಂದ 5 ಅಡಿ ದೂರವಿತ್ತು ಹಾಗಾಗಿ ಯಾವ ವ್ಯಕ್ತಿ ನನ್ನ ಬಳಿ ಫೋನ್ ಕೇಳಿದ ಎಂದು ನಿರ್ಧಿಷ್ಟವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ತದನಂತರ ವಿಚಾರ ತಿಳಿದು ಬಂದಿರುತ್ತದೆ. ಉಳಿದ ಆರೋಪಿತರು ನನ್ನಿಂದ ಒಂದೂವರೆ ಯಿಂದ

2 ಅಡಿ ದೂರದಲ್ಲಿದ್ದರು. ನನ್ನಿಂದ ಕೊರಳಲ್ಲಿನ ಕೈಚೈನನ್ನು ಮತ್ತು ಮೊಬೈಲನ್ನು ಯಾರು ಕಿತ್ತುಕೊಂಡರು ಎಂದು ನನಗೆ ನಿರ್ಧಿಷ್ಟವಾಗಿ ಹೇಳಲಾಗುವುದಿಲ್ಲವೆಂದರೆ ಸಾಕ್ಷಿ ಮೂವರು ಸೇರಿ ಕಿತ್ತುಕೊಂಡಿರುತ್ತಾರೆ ಎಂದು ನುಡಿಯತ್ತಾರೆ. ಮೊದಲಿಗೆ ಸಮೀರ್ ಎಂಬಾತ ನನ್ನ ಮೊಬೈಲನ್ನು ಕಿತ್ತುಕೊಂಡು ಓಡಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮೊಬೈ ಲ್ ಕಳುವಾದ ವಿಚಾರವನ್ನು ಮೊದಲಿಗೆ ಯಾರಿಗೆ ಹೇಳಿರತ್ತೀರಿ ಎಂದರೆ ಸಾಕ್ಷಿ ಮೊಬೈಲ್ ಕಿತ್ತುಕೊಂಡು ಹೋದ ವಿಚಾರವನ್ನು ಚಾಸಾ-7 ಮತ್ತು 8 ರವರಿಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು. )**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 796/2024**

ಹೆಸರುಃ ದೀಪಕ್ ಪ್ರಭು ಸಿ.ಡಬ್ಲ್ಯೂಃ 2

ತಂದೆಃ ಸಂಜಯ್ ಪ್ರಭು ಪಿ.ಡಬ್ಲ್ಯೂಃ 4

ವಯಸ್ಸುಃ 37

ಉದ್ಯೋಗಃ ಗಸ್ತು ಅರಣ್ಯ ಪಾಲಕ, ಚನ್ನಗಿರಿ

ವಾಸ ಸ್ಥಳಃ ಚನ್ನಗಿರಿ

ಸಾಕ್ಷಿಗೆ ದಿನಾಂಕಃ 15-07-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸಅಅರವರಿಂದ**

2021 ರಿಂದ ಇಲ್ಲಿಯವರೆಗೆ ಚನ್ನಗಿರಿ ವಲಯದಲ್ಲಿ ಗಸ್ತು ಅರಣ್ಯ ಪಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 11-08-2023 ರಂದು ಚನ್ನಗಿರಿ ಪೊಲೀಸ್ ಠಾಣಾ ತನಿಖಾಧಿಕಾರಿಗಳು ಚನ್ನಗಿರಿ ವಲಯಅರಣ್ಯಾಧಿಕಾರಿಗಳ ಕಚೇರಿ ಆವರಣದ ಪಕ್ಕದಲ್ಲಿರುವ ಖಾಲಿ ಜಾಗದಲ್ಲಿ ಇದ್ದ ನನ್ನನ್ನು ಬರಮಾಡಿಕೊಂಡು ಚನ್ನಗಿರಿ ಗುನ್ನ ನಂ 334/2023 ರಂತೆ ಭಾ ದಂ , ಸಂ ಕಲಂ 224 ಪ್ರಕರಣದಡಿಯಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-4ರ ವರು ಏನನ್ನು ಹೇಳಿ ತೋರಿಸುತ್ತಾರೋ ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಬೇಕಾಗಿರುವುದರಿಂದ ಸದರಿ ಪಂಚನಾಮೆಗೆ ಪಂಚರಾಗಿ ಸಹಕರಿಸಬೇಕೆಂದು ಕೋರಿದ್ದು ಅದಕ್ಕೆ ನಾವು ಒಪ್ಪಿದ ಮೇರೆಗೆ ನಮ್ಮ ಮೇಲೆ ನೋಟಿಸನ್ನು ಜಾರಿ ಮಾಡಿರುತ್ತಾರೆ. ಸದರಿ ನೋಟಿಸಿಗೆ ಸಹಿ ಮಾಡಿ ಸದರಿ ಸ್ಥಳದಲ್ಲಿ ಹಾಜರಿದ್ದು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-4 ರವರು ನಮಗೆ ತಿಳಿಸಿದಂತೆ ದಿಃ 10-08-2023ರ ಸಂಜೆ 6.30 ಕ್ಕೆ ಉಬ್ರಾಣಿ ಶಾಖೆಯ ಬಸವಾಪುರ ಗಸ್ತಿನಲ್ಲಿ ನಾನು, ಚಾಸಾ-5 ಮತ್ತು ನವೀನ್ ಕುಮಾರ್ ರವರೊಂದಿಗೆ ಗಸ್ತಿನ ಕರ್ತವ್ಯದಲ್ಲಿದ್ದಾಗ ಹರೋನಹಳ್ಳಿಯಿಂದ ಎದ್ದೇಲೆಗೆ ಹೋಗುವ ಮಣ್ಣಿನ ದಾರಿಯ ಸ್ವಲ್ಪ ದೂರದಲ್ಲಿ ಒಂದು ಓಮಿನಿ ಕಾರಿನಲ್ಲಿ ಏನನ್ನೊ ತುಂಬುತ್ತಿರುವುದುಕಂಡು ನಾವು ಸದರಿ ಪ್ರದೇಶಕ್ಕೆ ಓಡಿಹೋಗಿ ನೋಡಿದಾಗ ಅಲ್ಲಿದ್ದ ಇಬ್ಬರೂ ಆಸಾಮಿಗಳು ನಮ್ಮನ್ನು ನೋಡಿ ಅರಣ್ಯ ಪ್ರದೇಶದ ಒಳಗ ಓಡಿಹೋಗಿರುತ್ತಾರೆ, ನನ್ನ ಜೊತೆಯಲ್ಲಿದ್ದ ಚಾಸಾ-5ರವರು ತಕ್ಷಣವೇ ಓಡಿಹೋಗಿ ಇಬ್ಬರು ಆಸಾಮಿಗಳ ಪೈಕಿ ಒಬ್ಬನನ್ನು ಹಿಡಿದುಕೊಂಡು ಬಂದಿರುತ್ತಾರೆ. ಅತನನ್ನು ವಿಚಾರಿಸಿದಾಗ ತನ್ನಹೆಸರು ರಾಜಪ್ಪ ಬಿನ್ ಚಿನ್ನಪ್ಪ ಬೋವಿ , ವೀರಾಪುರ ಗ್ರಾಮ ಎಂದು ತಿಳಿಸಿರುತ್ತಾರೆ.

ಮುಂದುವರೆದು ಸ್ಥಳದಲ್ಲಿದ್ದ ಓಮಿನಿ ಕಾರನ್ನು ಪರಿಶೀಲಿಸಿದಾಗ ವಾಹನದ ನೊಂದಣಿ ಸಂಖ್ಯೆ ಕೆಎ-17/ಪಿ-5815 ಸಿಲ್ವರ್ ಬಣ್ಣದ್ದಗಿರುತ್ತದೆ. ಸದರಿ ವಾಹನದಲ್ಲಿ ಹತ್ಯೆಗೊಳಗಾದ ಚುಕ್ಕಿ ಜಿಂಕೆಯನ್ನು ತುಂಬಿರುವುದು ಕಂಡುಬಂದಿರುತ್ತದೆ. ಸದರಿ ಆಸಾಮಿಯನ್ನು ಸದರಿ ಚುಕ್ಕಿ ಜಿಂಕೆಯನ್ನು ಎಲ್ಲಿಂದ ತಂದಿರುವಿರಿ ಎಂದು ವಿಚಾರಿಸಿದಾಗ ಆತ ನನ್ನೊಡನೆ ಇದ್ದ ಮಲ್ಲಪ್ಪ ಬಿನ್ ಬಸಪ್ಪ, ಶಿವಲಿಂಗಪ್ಪ ಬಿನ್ ಹುಲಿಯಪ್ಪ ಇವರು

ತಂತಿಯ ಹುರಳನ್ನು ಉಪಯೋಗಿಸಿ ಸದರಿ ಜಿಂಕೆಯನ್ನು ಹತ್ಯೆ ಮಾಡಿ ಮುಚ್ಚಿಟ್ಟು ತನ್ನನ್ನು ಓಮಿನಿ ವಾಹನವನ್ನು ತೆಗೆದುಕೊಂಡು ಬಾ ಎಂದು ತಿಳಿಸಿದರು. ಅದರಂತೆ ನಾನು ಸದರಿಯರು ಸೂಚಿಸಿದ ಸ್ಥಳಕ್ಕೆ ಬಂದು ಸದರಿ ಜಿಂಕೆಯನ್ನು ಸದರಿ ವಾಹನಕ್ಕೆ ತುಂಬಿರುತ್ತೇನೆ.

ಸದರಿ ಕೃತ್ಯವು ಕಾನೂನುಬಾಹಿರವೆಂದು ತಿಳಿಸಿ ಸದರಿ ಆಸಾಮಿಯನ್ನು ಹಾಗೂ ಓಮಿನಿಯನ್ನು ಹಾಗೂ ಚುಕ್ಕಿ ಜಿಂಕೆಯನ್ನು ವಶಕ್ಕೆ ಪಡೆದರು ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ಇಲಾಖಾ ಮುಖ್ಯಸ್ಥರಾದ ವಲಯ ಅರಣ್ಯಾಧಿಕಾರಿಗಳಿಗೆ ಮಾಹಿತಿಯನ್ನು ತಿಳಿಸಿರುತ್ತೇನೆ. ಸದರಿ ಇಲಾಖಾ ಮುಖ್ಯಸ್ಥರಾದ ವಲಯಅರಣ್ಯಾಧಿಕಾರಿಗಳು ಸದರಿ ಆಸಾಮಿ ಮತ್ತು ವಾಹನವನ್ನು ಮತ್ತು ಚುಕ್ಕಿ ಜಿಂಕೆಯನ್ನು ಕಚೇರಿಗೆ ತಂದು ಹಾಜರುಪಡಿಸುವಂತೆ ತಿಳಿಸಿರುತ್ತಾರೆ. ನಂತರ ವಶಕ್ಕೆ ಸಿಕ್ಕ ಆಸಾಮಿಯ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24, 71(ಎ) ಕರ್ನಾಟಕ ಅರಣ್ಯ ನಿಯಮ 1969 ರ ಕಲಂ 165 ಹಾಗೂ ವನ್ಯ ಜೀವಿ ಸಂರಕ್ಷಣಾ ಕಾಯ್ದೆ 1972ರ ಕಲಂ 9,39,50,51 ರ ಪ್ರಕಾರ ಪ್ರಕರಣವನ್ನು ದಾಖಲಿಸಿ, ಸದರಿ ಆಸಾಮಿಯನ್ನು ಇಲಾಖಾ ಅರಣ್ಯ ಕಚೇರಿಯ ಅಭಿರಕ್ಷೆಯಲ್ಲಿ ಇರಿಸಿ ಮಾರನೇ ದಿನ ದಿಃ11-08-2023ರಂದು ಸದರಿ ಆಸಾಮಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿದ್ದರಿಂದ ವಲಯ ಕಚೇರಿಯಲ್ಲಿಯೇ ಬೆಂಗಾವಲು ಸಿಬ್ಬಂದಿಗಳಾಗಿ ನಾನು ಮತ್ತು ಚಾಸಾ-5 ರವರು ಇದ್ದು ದಿಃ 11-08-2023ರ ಬೆಳಗಿನ ಜಾವ 5.30ರ ಸುಮಾರಿಗೆ ಆಸಾಮಿಯು ಮೂರ್ತ ವಿಸರ್ಜನೆ ಮಾಡಬೇಕೆಂದು ಕೇಳಿದ್ದು ನಾನು ಹಾಗೂ ಚಾಸಾ-5 ರವರು ಸದರಿ ಅಸಾಮಿಯನ್ನು ಸೆಲ್ ನಿಂದ ಹೊರಗೆ ಕರೆದುಕೊಂಡು ವಲಯ ಕಚೇರಿಯ ಪಕ್ಕದಲ್ಲಿರುವ ಬಯಲಿಗೆ ಕರೆದುಕೊಂಡು ಬಂದಿರುತ್ತೇವೆ. ಸದರಿ ಸಮಯಕ್ಕೆ ಸದರಿ ಆಸಾಮಿಯು ಕುಳಿತು ಮೂರ್ತ ವಿಸರ್ಜನೆ ಮಾಡಿ ಅಲ್ಲೆ ಇದ್ದ ಕಲ್ಲಿನಿಂದ ಗಸ್ತು ಅರಣ್ಯ ಪಾಲಕರಾದ ಚಾಸಾ-5 ರವರ ಮೇಲೆ ಕಲ್ಲನ್ನು ಬೀಸಿರುತ್ತಾನೆ. ಸದರಿ ಹೊಡತೆದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಸದರಿ ಅಸಾಮಿಯು ಅಲ್ಲಿಂದ ಓಡಿಹೋಗಿರುತ್ತಾನೆ ಎಂದು ತೋರಿಸಿದ ಸ್ಥಳವು ವಲಯ ಅರಣ್ಯಧಿಕಾರಿಯ ಕಚೇರಿಯ ಪಕ್ಕದ ಖಾಲಿ ಜಾಗವಾಗಿದ್ದು ಸದರಿ ಸ್ಥಳದಲ್ಲಿ ಜಲ್ಲ ಕಲ್ಲು ಇದ್ದು , ಸದರಿ ಕಚೇರಿ ಸುತ್ತಲು ಕೈಗೆಟಕುವ ಎತ್ತರದ ಕಾಪೌಂಡ್ ಗೋಡೆ ಇರುತ್ತದೆ. ಸದರಿ ಆಸಾಮಿಯ ಅಲ್ಲಿಂದ ಗೋಡ ಹಾರಿ ಓಡಿಹೋಗಿರುತ್ತಾರೆ. ಸದರಿ ಜಾಗದ ಚೆಕ್ಕುಬಂದಿಯನ್ನು ನೋಡಲಾಗಿ ಪೂರ್ವಕ್ಕೆ ತಹಶೀಲಾದರ್ ರವರ ವಸತಿ ಗೃಹ, ಪಶ್ಚಿಮಕ್ಕೆ ವಲಯ ಅರಣ್ಯಧಿಕಾರಿಗಳವರ ವಸತಿ ಗೃಹ, ಉತ್ತರಕ್ಕೆ ಶಿವಮೊಗ್ಗ-ಚಿತ್ರದುರ್ಗ ರಸ್ತೆ, ದಕ್ಷಿಣಕ್ಕೆ ಇಲಾಖೆ ಸಿಬ್ಬಂದಿಗಳ ವಸತಿ ಗೃಹ ಇರುತ್ತದೆ.

ಸಾಕ್ಷಿ ಸದರಿ ಕಡತದಲ್ಲಿನ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಪೊಟೋದಲ್ಲಿ ನಾನು ಇದ್ದೇನೆ. ಸದರಿ ಪೊಟೋವನ್ನು ನಿಪಿ1 ರ ಸಮಯಕ್ಕೆ ತೆಗೆಯಲಾಗಿರುತ್ತದೆ. ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಡಿದೆ. ಸದರಿ ದಾಖಲೆ ಕೃತ್ಯ ನಡೆದ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-3  ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ಎಸ್ ಎಸ್ ವಕೀಲರಿಂದಃ**

ನಾನು ಪ್ರಸ್ತುತ ಪ್ರಕರಣಕ್ಕೆ ಪ್ರತ್ಯಕ್ಷದರ್ಶಿ ಸಾಕ್ಷಿದಾರನಲ್ಲ ಎಂದರೆ ಸರಿ. ಸದರಿ ಪ್ರಕರಣದ ಮಾಹಿತಿಯನ್ನು ನಾನು ಚಾಸಾ-8 ರವರಿಂದ ತಿಳಿದುಕೊಂಡಿರುತ್ತೇನೆ. ನಮ್ಮ ಇಲಾಖೆಯ ವಲಯ ಅರಣ್ಯಧಿಕಾರಿಗಳ ಕಚೇರಿಯಲ್ಲಿ ಸುಮಾರು 4 ಕೋಣೆಗಳಿವೆ. ಸದರಿ ಕೋಣೆಗಳಲ್ಲಿ ಒಂದನ್ನು ವಲಯ ಅರಣ್ಯಧಿಕಾರಿಗಳ ಕೋಣೆ, ಇನ್ನೊಂದು ಕಚೇರಿ ಕಾರ್ಯಕ್ಕಾಗಿ , ಇನ್ನೊಂದು ಕೋಣೆಯನ್ನು ಉಪವಲಯ ಅರಣ್ಯಾಧಿಕಾರಿಗಳ ಕಚೇರಿಯಾಗಿ ನ್ಯಾಯಾಲಯದ ಕರ್ತವ್ಯಕ್ಕಾಗಿ, ಮತ್ತೊಂದು ಕೋಣೆಯನ್ನು  ಉಪವಲಯ ಅರಣ್ಯಾಧಿಕಾರಿಗಳ ಐಸಿಟಿ ಯಾಗಿ ಬಳಸುತ್ತಾರೆ. ಸದರಿ ಕೋಣೆಗಳನ್ನು ಹೊರತುಪಡಿಸಿ ಬಂದಿಖಾನೆಯ ಸಹ ಇದೆ ಎಂದರೆ ಸರಿ. ನಮ್ಮ ಕಚೇರಿಯಲ್ಲಿ 2 ಶೌಚಾಲಯಗಳು ಇವೆ. ನಿಪಿ-2 ರಲ್ಲಿ ಕಾಣಿಸುತ್ತಿರುವ ಜಾಗ  ವಲಯ ಅರಣ್ಯಾಧಿಕಾರಿಗಳ ಕಚೇರಿಯ ಪಕ್ಕದಲ್ಲಿರುವ ಖಾಲಿ ಜಾಗ ಎಂದರೆ ಸರಿ. ಸದರಿ ಜಾಗದ ಪಕ್ಕದಲ್ಲಿರುವ ಕಾಂಪೌಂಡ್ ಗೋಡೆ 8 ರಿಂದ 10 ಅಡಿ ಎತ್ತರದಲ್ಲಿದೆ ಎಂದರೆ ಸಾಕ್ಷಿ 5 ಅಡಿ ಇದೆ ಎಂದು ನುಡಿಯುತ್ತಾರೆ. ಸದರಿ ಕಚೇರಿಯ ಹಿಂಭಾಗ ನಮ್ಮ ಇಲಾಖೆಯ  ವಲಯ ಸಿಬ್ಬಂದಿಗಳ ವಸತಿ ಗೃಹ ಇದೆ ಎಂದರೆ ಸರಿ. ಅದೇ ರೀತಿ ಸದರಿ ಕಚೇರಿಯ ಪಶ್ಚಿಮಕ್ಕೆ ವಲಯ ಅರಣ್ಯಾಧಿಕಾರಿಗಳ ವಸತಿ ಗೃಹ ಇದೆ ಎಂದರೆ ಸರಿ. ನಾವು ನಮ್ಮ ಕಚೇರಿಯ ಅಕ್ಕಪಕ್ಕದ ಸ್ವಚ್ಛತೆಯನ್ನು ಕಾಪಾಡುತ್ತೇವೆ ಎಂದರೆ ಸರಿ. ಅದರಂತೆ ನಮ್ಮ ಕಚೇರಿಯ ಸುತ್ತಮುತ್ತಲಿನ ಜಾಗವನ್ನು ಶೌಚಕ್ಕಾಗಲಿ ಅಥವಾ ಮೂರ್ತ ವಿಸರ್ಜನೆಗಾಗಲಿ ಬಳಸುವುದಿಲ್ಲ ಎಂದರೆ ಸರಿ. ನಮ್ಮ ಕಚೇರಿಯ ಉತ್ತರಕ್ಕೆ ಶಿವಮೊಗ್ಗ-ಚಿತ್ರದುರ್ಗದ ರಾಷ್ಟ್ರೀಯ ಹೆದ್ದಾರಿ ಇದೆ ಎಂದರೆ ಸರಿ. ಸದರಿ ಹೆದ್ದಾಗಿ ಜನನಿಬಿಡವಾಗಿರುತ್ತದೆ ಎಂದರೆ ಸರಿ. ನಮ್ಮ ಕಚೇರಿಯ 4 ದಿಕ್ಕುಗಳಲ್ಲಿ ಜನ ಓಡಾಡುವ ಜಾಗ ಇದೆ ಎಂದರೆ ಸರಿ.

ನಿಪಿ-1ರಲ್ಲಿನ ನನ್ನ ಸಹಿಗೂ ನಿಪಿ-3 ರಲ್ಲಿನ ನನ್ನ ಸಹಿಗೂ ವ್ಯತ್ಯಾಸವಿದೆ ಎಂದರೆ ಸರಿ. ಸದರಿ ಸಹಿಗಳನ್ನು ನಾನು ನಮ್ಮ ಮೇಲಾಧಿಕಾರಿಗಳ  ಮಾತನ್ನು ಕೇಳಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ವಶದಲ್ಲಿದ್ದ ಎಂದು ನಾನು  ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಆರೋಪಿ ನಮ್ಮ ಅಭಿರಕ್ಷೆಯಲ್ಲಿ ಎಂದಿಗೂ ಇರಲಿಲ್ಲ ಎಂದರೆ ಸರಿಯಲ್ಲ.  ಆರೋಪಿಯ ವಿರುದ್ದ ಪ್ರಸ್ತುತ ಪ್ರಕರಣವನ್ನು ಚಾಸಾ-8 ರವರು ಸೃಷ್ಟಿ ಮಾಡಿದ್ದು ಅದಕ್ಕೆ ನಾನು ಸಹಕರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಿಪಿ-1 ಮತ್ತು 3 ಕ್ಕೆ ನಾನು ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

Sd/-

**01ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**